

ಹೆಚ್ಚಾದ ಕಾರಣ ಹೋಮ್‌ಸ್ಟೇ, ಲಾಡ್ಜ್ ಅಥವಾ ಹೋಟೆಲ್‌ಗಳ ಸಂಖ್ಯೆಯೂ ವೃದ್ಧಿಯಾಗಿದೆ. ಈ ಊರು ಸೇರಿ ಸುತ್ತಮುತ್ತಲಿನ ಪ್ರದೇಶವು ಪಂಬನ್ ದ್ವೀಪಗಳ ಭಾಗ.

ರಾಮೇಶ್ವರಂ ಪ್ರವೇಶಿಸುತ್ತಿದ್ದಂತೆಯೇ, ಅಲ್ಲಿ ಸಮುದ್ರದಲ್ಲಿ ನಿರ್ಮಿತ ರೈಲ್ವೆ ಸೇತುವೆ ಆಕರ್ಷಿಸುತ್ತದೆ. ಜೊತೆಗೆ ಸಮುದ್ರವೇ ಆಕಾಶದಲ್ಲಿ ಲೀನವಾದಂತಹ ನೋಟ ಕಾಣಸಿಗುತ್ತದೆ. ಅತ್ಯಾಧುನಿಕ ತಂತ್ರಜ್ಞಾನದೊಂದಿಗೆ ಸ್ವಯಂ ಚಾಲಿತ ಸೌಲಭ್ಯವುಳ್ಳ ಎರಡು ಪಂಬನ್ ಸೇತುವೆಗಳಿವೆ. ಬೃಹತ್ ಹಡಗುಗಳ ಸಾಗಣೆಗೆ ಒಂದು ಸೇತುವೆ ಮುಕ್ತವಾಗಿ ತೆರೆದುಕೊಂಡರೆ, ಇನ್ನೊಂದು ಸೇತುವೆ ರೈಲುಗಳ ಸಂಚಾರಕ್ಕೆ ಅವಕಾಶ ಕಲ್ಪಿಸುತ್ತದೆ. ಒಟ್ಟು ₹550 ಕೋಟಿ ವೆಚ್ಚದಲ್ಲಿ ನಿರ್ಮಿಸಲಾಗಿರುವ ಹೊಸ ರೈಲ್ವೆ ಸೇತುವೆಯನ್ನು ಇದೇ ವರ್ಷ ಏಪ್ರಿಲ್‌ನಲ್ಲಿ ಉದ್ಘಾಟಿಸಲಾಯಿತು. ಸಮುದ್ರದ ಸೇತುವೆಯ ಮೇಲೆ ರೈಲು 2 ಕಿ.ಮೀ.ನಷ್ಟು ಅಂತರ ಕ್ರಮಿಸುತ್ತದೆ.



ಸುನಾಮಿಯಿಂದ ಹಾನಿಗೊಳಗಾದ ಚರ್ಚ್‌ನ ಅವಶೇಷ

ಇವುಗಳಷ್ಟೇ ಅಲ್ಲ, ಇಲ್ಲಿ ಕರಾವಳಿಗೆ ಸಂಬಂಧಿಸಿದಂತೆ ವಸ್ತು ಸಂಗ್ರಹಾಲಯಗಳಿವೆ. ಮಾಜಿ ರಾಷ್ಟ್ರಪತಿ ಡಾ. ಎ.ಪಿ.ಜೆ. ಅಬ್ದುಲ್ ಕಲಾಂ ಅವರ ಮನೆಯಿದೆ. ಅವರ ಮನೆಯಲ್ಲಿ ಅವರು ಬಳಸಿದ ವಸ್ತುಗಳಿವೆ. ಅವರ ಮನೆಯನ್ನೇ ವಸ್ತು ಸಂಗ್ರಹಾಲಯವಾಗಿ ಪರಿವರ್ತಿಸಲಾಗಿದೆ. ಇನ್ನೊಂದು ವಸ್ತು ಸಂಗ್ರಹಾಲಯದಲ್ಲಿ ಇನ್ನಷ್ಟು ಅಪರೂಪದ ವಸ್ತುಗಳನ್ನು ವೀಕ್ಷಿಸಬಹುದು.

## ಸಾಗರ ಸಂಗಮ

ರಾಮೇಶ್ವರಂನಿಂದ ಸುಮಾರು 20 ಕಿ.ಮೀ. ದೂರ ಇರುವಂಥದ್ದೇ ಧನುಷ್ಕೋಡಿ ಎಂಬ ಸ್ಥಳ. 'ರಾಮಸೇತುವೆ' ನೋಡಲು ಮತ್ತು ದೇಗುಲಗಳ ದರ್ಶನ ಪಡೆಯಲು ಹೆಚ್ಚಿನ ಸಂಖ್ಯೆಯಲ್ಲಿ ದೇಶದ ವಿವಿಧೆಡೆಯಿಂದ ಭಕ್ತರು ಬರುತ್ತಾರೆ. 'ಕಲ್ಲುಗಳಿಂದ ಕೂಡಿದ ರಾಮಸೇತುವೆ ಈಗ ಕಾಣದಿದ್ದರೂ ಚಿಂತೆಯಿಲ್ಲ. ಆದರೆ, ಒಂದಾನೊಂದು ಕಾಲದಲ್ಲಿ ಅಂಥ ಅದ್ಭುತ ಇಲ್ಲಿ ಜರುಗಿತ್ತು ಎಂಬ ನಂಬಿಕೆ ಮತ್ತು ಶ್ರದ್ಧೆ ನಮಗಿದೆ' ಎಂದು ಇಲ್ಲಿ ಬರುವ ಕೆಲವರು ಹೇಳುತ್ತಾರೆ.



ಧನುಷ್ಕೋಡಿಯ ವೃತ್ತದಲ್ಲಿ
ನಾಲ್ಕು ಸಿಂಹಗಳ ಆಕೃತಿ ಹೊಂದಿರುವ ಕಂಬ

ಇಲ್ಲಿ ಬಂಗಾಳ ಕೊಲ್ಲಿ ಸಮುದ್ರ ಮತ್ತು ಹಿಂದೂ ಮಹಾಸಾಗರ ಸಂಗಮವಾಗುತ್ತವೆ. ಎರಡೂ ಸಾಗರಗಳ ವರ್ತನೆ ಭಿನ್ನವಾಗಿದ್ದು, ಪರಸ್ಪರ ಮಿಶ್ರಣಗೊಳ್ಳುವುದಿಲ್ಲ. ಎಡಬದಿಯಲ್ಲಿ ಬಂಗಾಳ ಕೊಲ್ಲಿ ತನ್ನ ಪಾಡಿಗೆ ತಾನು ಶಾಂತಚಿತ್ತವಾಗಿ ನದಿಯಂತೆ ಕಾಣಸಿಗುತ್ತದೆ. ಅದರ ಬಣ್ಣ ಕೊಂಚ ನೀಲಿ, ಕೊಂಚ ಹಸಿರು. ಆದರೆ, ಎಷ್ಟೇ ಗಾಳಿ ಬೀಸಿದರೂ ಮತ್ತು ಮಳೆ ಸುರಿದು ಪ್ರಚೋದಿಸಿದರೂ ರೌದ್ರರೂಪ ತಾಳುವುದಿಲ್ಲ. ಎಲ್ಲರನ್ನೂ ಪ್ರೀತಿಯಿಂದ ಆಹ್ವಾನಿಸುತ್ತದೆ.



ರಾಮೇಶ್ವರಂ ಬಳಿಯ ಪಂಬನ್ ಸೇತುವೆ